**ದಿನಾಂಕ 18.06.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಅರ್ಜಿದಾರರ ಪರ ಕುಮಾರಿ ಎಸ್ ಬಿ ವಕೀಲರಿಂದಃ**

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ. ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ.ಅರ್ಜಿಗೆ ಸಂಬಂದಪಟ್ಟಂತೆ ಕೇಸ್ ಶೀಟನ್ನು ನಿಪಿ-8 ಎಂದು, ಕ್ಷಕಿರಣವನ್ನು ನಿಪಿ-9 ಎಂದು, ಹೊರ ರೋಗಿ ಚೀಟಿಯನ್ನು ನಿಪಿ-10 ಎಂದು, ಇತ್ತೀಚಿನ ಹೊರ ರೋಗಿ ಚೀಟಿಯನ್ನು ನಿಪಿ-11 ಎಂದು, ಆಡಿಯೋಗ್ರಾಮ್ ಅನ್ನು ನಿಪಿ-12 ಎಂದು, 2 ಕಣ್ಣಿನ ಪರೀಕ್ಷಾ ವರದಿಗಳನ್ನು ನಿಪಿ-13 ಮತ್ತು ನಿಪಿ-14 ಎಂದು, ಎಂ ಎಲ್ ಸಿ ಯನ್ನು ನಿಪಿ-15 ಎಂದು, ಠಾಣೆಗೆ ನೀಡಿದ ಮಾಹಿತಿಯನ್ನು ನಿಪಿ-16 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಎಸ್ ವೈ ಎಸ್ ವಕೀಲರಿಂದಃ**

ಅಪಘಾತವಾದ ನಂತರ ಅರ್ಜಿದಾರರು ಚನ್ನಪಟ್ಟಣ ಬಿ ಜಿ ಲಿಂಗೇಗೌಡ ಆಸ್ಪತ್ರೆಯಲ್ಲಿ ನಂತರ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿರುತ್ತಾರೆ. ಅರ್ಜಿದಾರರಿಗೆ ತಲೆಗೆ ಚಿಕಿತ್ಸೆ ನೀಡಿದ್ದರು. ನಮ್ಮ ಆಸ್ಪತ್ರೆಯ ಬೇರೆ ವೈದ್ಯಾಧಿಕಾರಿ ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತಾರೆ. ನಾನು ಚಿಕಿತ್ಸೆ ನೀಡಿದ ಬಗ್ಗೆ ದಾಖಲೆಗಳಲ್ಲಿ ನಮೂದಿಸಿರುತ್ತೇನೆ. ಶಸ್ತ್ರ ಚಿಕಿತ್ಸೆಯನ್ನು ನಾನೇ ಮಾಡಿರುತ್ತೇನೆ. ಅರ್ಜಿದಾರರಿಗೆ ಮೂಳೆಗಳು ಕೂಡಿಕೊಂಡಿವೆ ಎಂದರೆ ನಿಜ. ರಕ್ತ ಹೆಪ್ಪುಗಟ್ಟುವಿಕೆ ನಿವಾರಣೆಯಾಗಿದೆ ಎಂದರೆ ನಿಜ. ಅಂಗ ನ್ಯೂನ್ಯತಾ ಪ್ರಮಾಣ ಪತ್ರ ನೀಡುವಾಗ ರಕ್ತ ಹೆಪ್ಪುಗಟ್ಟುವಿಕೆ ನಿವಾರಣೆಯಾಗಿ ಯಾವುದೇ ತೊಂದರೆ ಇರಲಿಲ್ಲ.ಅಪಘಾತವಾಗುವ ಮೊದಲು ಅರ್ಜಿದಾರರಿಗೆ ಕಿವಿಯ ತೊಂದರೆ ಇರುವ ಬಗ್ಗೆ ನಮಗೆ ಮಾಹಿತಿ ಕೊಟ್ಟಿಲ್ಲ. ಅರ್ಜಿದಾರರಿಗೆ ಎಡ ಕಿವಿ ಈಗ ಚೆನ್ನಾಗಿ ಕೇಳಿಸುವುದಿಲ್ಲ. ಅರ್ಜಿದಾರರಿಗೆ ಎಡ ಕಿವಿಗೆ ಉಪಕರಣ ಉಪಯೋಗಿಸಿದರೂ ಸರಿಹೋಗುವುದಿಲ್ಲ. ಅಂಗ ನ್ಯೂನ್ಯತಾ ಪ್ರಮಾಣ ಪತ್ರ ನೀಡುವಾಗ ಅರ್ಜಿದಾರರಿಗೆ ಎಡ ಕಿವಿಯ ನ್ಯೂನ್ಯತೆಯ ಬಗ್ಗೆ ವರದಿಯನ್ನು ಮಾಡಿರುತ್ತೇನೆ. ನಾನು Apthomology ರವರ ಸಲಹೆಯನ್ನು ಪಡೆದಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅರ್ಜಿದಾರರಿಗೆ ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಯಿಂದ ಯಾವುದೇ ತೊಂದರೆ ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಮೂಳೆ ಮುರಿತದಿಂದ ತೊಂದರೆ ಇದೆ ಎಂದು

ನುಡಿಯುತ್ತಾರೆ. ಅಂಗ ನ್ಯೂನ್ಯತಾ ನಿರ್ದರಣೆ ಮಾಡಿದ ವಿಧಾನದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಸಲ್ಲಿಸಿರುತ್ತೇನೆ. ಅರ್ಜಿದಾರರಿಗೆ ಮೂಳೆ ಮುರಿತ ಕೂಡಿಕೊಂಡಿದ್ದರೂ ನಾನು ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಬರಲೀ ಎಂದು ಹೆಚ್ಚಿನ ಅಂಗ ನ್ಯೂನ್ಯತೆಯನ್ನು ತೋರಿಸಿದ್ದೇನೆಂದರೆ ಸುಳ್ಳು. ಅರ್ಜಿದಾರರರಿಗೆ ಅಂಗ ನ್ಯೂನ್ಯತೆ ಶೇಕಡಾ 6-8 ರಷ್ಟು ಬರುತ್ತದೆ ಸುಳ್ಳು. ಅರ್ಜಿದಾರರ ಸಂಪೂರ್ಣ ದೇಹಕ್ಕೆ ಅಂಗ ನ್ಯೂನ್ಯತಾ ನಿರ್ದರಣೆ ಮಾಡಿಲ್ಲ ಎಂದರೆ ಸಾಕ್ಷಿಯು ಬೇಕಾಗಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**